**ಪಲ್ಲವಿ ಆಕುರಾತಿ, ಭಾ.ಆ.ಸೇ**
ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ

ಮಕ್ಕಳ ರಕ್ಷಣಾ ನಿರ್ದೇಶನಾಲಯ
ವಿಶ್ವೇಶ್ವರಯ್ಯ ಕೇಂದ್ರ, ಚಿಕ್ಕಗೋಪುರ
3ನೇ ಮಹಡಿ, ಡಾ. ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು-560001
✆ : 080-22867381/82/83
ಇ–ಮೇಲ್ : icps.kar@gmail.com

**ಸಂಖೆ:ಮರನಿ/ಮರ/ಮ.ಪಾ.ಸಂ–59/2021–22** **ದಿನಾಂಕ:15.09.2021**

ನಿರ್ದೇಶಕರು/ಆಯುಕ್ತರು
ತೋಟಗಾರಿಕೆ ಇಲಾಖೆ,
ಬೆಂಗಳೂರು.

ಮಾನ್ಯರೇ,

ವಿಷಯ: ಲಾಲ್‌ಬಾಗ್‌ನಲ್ಲಿ ಮಕ್ಕಳ ರಕ್ಷಣೆ ಹಿತದೃಷ್ಟಿಯಿಂದ ತಕ್ಷಣ ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ: 1) ಈ ಕಛೇರಿಯ ಸಮಸಂಖ್ಯೆ ಪತ್ರ ದಿನಾಂಕ:05.04.2021
2) ತೋಟಗಾರಿಕೆ ಇಲಾಖೆಯ ಅಧಿಕಾರಿಗಳ ವಾಟ್ಸಪ್ ಸಂದೇಶ ದಿನಾಂಕ:06.04.2021

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಲಾಲ್‌ಬಾಗ್‌ನಲ್ಲಿ ಮಕ್ಕಳ ರಕ್ಷಣೆಯ ಹಿತದೃಷ್ಟಿಯಿಂದ ಉಲ್ಲೇಖ(1)ರ ಪತ್ರದಲ್ಲಿ ಕೆಲವು ಅಂಶಗಳನ್ನು ತಕ್ಷಣದಿಂದ ಅನುಷ್ಠಾನಗೊಳಿಸಲು ಕೋರಲಾಗಿತ್ತು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಲಾಲ್‌ಬಾಗ್ ಸುಮಾರು 250 ಎಕರೆಗಳಷ್ಟು ವಿಸ್ತೀರ್ಣವುಳ್ಳ ಪ್ರದೇಶವಾಗಿದ್ದು, ಇಲ್ಲಿಗೆ ಗರ್ಭಿಣಿ ಹಾಗೂ ವಯೋವೃದ್ಧರು ಹೆಚ್ಚು ಹೆಚ್ಚು ಆಗಮಿಸುವುದರಿಂದ ಬ್ಯಾಟರಿ ವಾಹನಗಳನ್ನು ನಿಷೇಧಿಸಲು ಸಾಧ್ಯವಿಲ್ಲವೆಂದು ಉಲ್ಲೇಖ(2)ರ ವಾಟ್ಸಪ್ ಸಂದೇಶದಲ್ಲಿ ತಿಳಿಸಲಾಗಿದೆ.

ಆದರೆ ಲಾಲ್‌ಬಾಗ್‌ಗೆ ತಾವೇ ತಿಳಿಸಿದಂತೆ ಗರ್ಭಿಣಿ ಮತ್ತು ವಯೋವೃದ್ಧರ ಜೊತೆಗೆ ಮಕ್ಕಳೂ ಸಹ ಹೆಚ್ಚು ಹೆಚ್ಚು ಬರುತ್ತಿರುವುದರಿಂದ ಈ ಕೆಳಕಂಡಂತೆ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಬಹುದಾಗಿದೆ. ವಿವರಗಳು ಈ ಕೆಳಕಂಡಂತಿವೆ.

1. ಲಾಲ್‌ಬಾಗ್ ಹೊರಗಡೆ ಎಲ್ಲಾ ವಾಹನಗಳನ್ನು ನಿಲ್ಲಿಸುತ್ತಿದ್ದು, ಜನರಿಗೆ ಲಾಲ್‌ಬಾಗ್ ಒಳಗಡೆ ವಾಹನ ಮುಕ್ತ ಎಂಬ ಭಾವನೆ ಬರುತ್ತಿದೆ. ಆದ್ದರಿಂದ ಲಾಲ್‌ಬಾಗ್ ಒಳಗಡೆ ಮಕ್ಕಳನ್ನು ವಾಹನದ ದೃಷ್ಟಿಯಿಂದ ಪೋಷಕರು ಗಮನ ಹರಿಸುತ್ತಿಲ್ಲ. ಆದರೆ ಲಾಲ್‌ಬಾಗ್ ಒಳಗಡೆ ಪ್ರದೇಶವು ಬ್ಯಾಟರಿ ವಾಹನ ಮುಕ್ತ ಅಲ್ಲ, ಆದ್ದರಿಂದ ಈ ರೀತಿ ಬ್ಯಾಟರಿ ವಾಹನಗಳು ಓಡಾಡುವ ಪ್ರದೇಶವಾಗಿದ್ದು, ಅಂತಹ ಕಡೆಗಳಿಗೆ ಮಕ್ಕಳನ್ನು ಬಿಡಬೇಡಿ ಎಂದು ಅರಿವು ಮೂಡಿಸುವುದು ಹಾಗೂ ಆದಷ್ಟು ಕಡೆ ಎಚ್ಚರಿಕೆ ಫಲಕಗಳನ್ನು ಅಳವಡಿಸುವುದು ಅವಶ್ಯಕವಾಗಿರುತ್ತದೆ. ಬ್ಯಾಟರಿ ವಾಹನ ಓಡಾಡುವ ರಸ್ತೆ ಬದಿಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಸಾಧ್ಯವಾಗದ ರೀತಿಯಲ್ಲಿ ಫೆನ್ಸ್ ಅಳವಡಿಸಲು ಕೋರಿದೆ. ಇದರಿಂದ ಮಕ್ಕಳು ತಮ್ಮ ಆಟವಾಡುವ ಚೆಂಡು ಇತರೆ ಆಟಿಕೆಗಳು ಸದರಿ ರಸ್ತೆಗಳಲ್ಲಿ ಬಿದ್ದಲ್ಲಿ ಈ ರೀತಿಯ ಫೆನ್ಸ್ ಇದ್ದರೆ ಮಕ್ಕಳು ಅನಾವಶ್ಯಕವಾಗಿ ಸದರಿ ರಸ್ತೆಗಳ ಮೇಲೆ ಬ್ಯಾಟರಿ ವಾಹನದಿಂದ ಅಪಘಾತಕ್ಕೆ ಒಳಗಾಗುವುದನ್ನು ತಪ್ಪಿಸಬಹುದು.

2. ಬ್ಯಾಟರಿ ವಾಹನ ಚಾಲಕರಿಗೆ ಮಕ್ಕಳಿರುವ ಪ್ರದೇಶಗಳಲ್ಲಿ ಹಾರನ್ ಕಡ್ಡಾಯವಾಗಿ ಮಾಡುವ ಹಾಗೂ ಇತರೆ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳುವ ಕುರಿತು ಅರಿವು ಮೂಡಿಸುವ ತರಬೇತಿಗಳನ್ನು ನೀಡುವುದು.

3. ಈ ಬ್ಯಾಟರಿ ವಾಹನಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರು ಯಾವುದೇ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳದೇ ತುಂಬಾ ಹತ್ತಿರ ಹತ್ತಿರ ಕುಳಿತುಕೊಳ್ಳುತ್ತಿದ್ದು, ಕೋವಿಡ್-19ರ ಹಿನ್ನೆಲೆಯಲ್ಲಿ ಎಲ್ಲರೂ ಸಾಮಾಜಿಕ ಅಂತರವನ್ನು ಪಾಲಿಸಲೂ ಸಹ ಅರಿವು ಮೂಡಿಸುವುದು.

4. ಬಿಬಿಎಂಪಿ ಏರಿಯಾಗಳಲ್ಲಿರುವ ಪಾರ್ಕ್‌ಗಳಲ್ಲಿ ಮಕ್ಕಳು ಆಟವಾಡಲು ಸೀ-ಸಾ, ಜಾರುಬಂಡಿ, ಜೋಕಾಲಿ, ಕ್ಲೈಂಬಿಂಗ್ ಇತರೆ ಆಟದ ಪರಿಕರಗಳನ್ನು ಅಳವಡಿಸಿರುವಂತೆ ತಮ್ಮ ಇಲಾಖಾ ವ್ಯಾಪ್ತಿಗೆ ಬರುವ ಲಾಲ್‌ಬಾಗ್, ಕಬ್ಬನ್ ಪಾರ್ಕ್ ಇತ್ಯಾದಿ ಸ್ಥಳಗಳಲ್ಲಿಯೂ ಸಹ ಮಕ್ಕಳಿಗೆ ಆಟವಾಡಲು ಅನುಕೂಲವಾಗುವಂತೆ ಸದರಿ ಆಟಿಕೆ ಪರಿಕರಗಳನ್ನು ಅಳವಡಿಸಲು ಕ್ರಮವಹಿಸಲು ಕೋರಲಾಗಿದೆ.

ಈ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಈ ಕಛೇರಿಗೆ ಒಂದು ತಿಂಗಳಲ್ಲಿ ಸಲ್ಲಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

15.09.2021

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು:-

1) ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಸಂಚಾಲಕರು ಬಾಲನ್ಯಾಯ ಸಮಿತಿ, ಹೈಕೋರ್ಟ್, ಬೆಂಗಳೂರು ರವರ ಮಾಹಿತಿಗಾಗಿ.
2) ಅಧ್ಯಕ್ಷರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಆಪ್ತಶಾಖೆಗೆ ಸಲ್ಲಿಸಿದೆ.
4) ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬೆಂಗಳೂರು ಇವರ ಆಪ್ತಶಾಖೆಗೆ ಸಲ್ಲಿಸಿದೆ.